# ಭಾ.ಕೃ.ಸಂ.ಪ.-ಸಿ.ಪಿ.ಸಿ.ಆರ್.ಐ.ನ ಕೊಕ್ಕೊ ತಳಿಗಳು

Companion of coconut community
Since 1916

ಶತಮಾನೋತ್ಸವ ಪ್ರಕಟಣೆ ಸಂಖ್ಯೆ : 57



ಭಾ.ಕೃ.ಸಂ.ಪ.-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
ಕಾಸರಗೋಡು - 671 124, ಕೇರಳ

भाकृअनुप
ICAR

क रो फ अ सं
CPCRI

# ಭಾ.ಕೃ.ಸಂ.ಪ.-ಸಿ.ಪಿ.ಸಿ.ಆರ್.ಐ. ನ ಕೊಕ್ಕೊ ತಳಿಗಳು

ಕೊಕ್ಕೊವನ್ನು ಭಾರತದಲ್ಲಿ ತೆಂಗು, ಅಡಿಕೆ ಮತ್ತು ತಾಳೆ ಬೆಳೆಗಳೊಂದಿಗೆ ಮಿಶ್ರಬೆಳೆಯಾಗಿ ಬೆಳೆಯಲಾಗುತ್ತದೆ. ಪ್ರಸ್ತುತ ಕೊಕ್ಕೊವನ್ನು ಕೇರಳ, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಸುಮಾರು 78 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು ಸುಮಾರು 16 ಸಾವಿರ ಟನ್ ಕೊಕ್ಕೊ ಉತ್ಪಾದನೆಯಾಗುತ್ತಿದೆ. ಪ್ರತಿ ಹೆಕ್ಟೇರ್‌ಗೆ ಸರಾಸರಿ ಉತ್ಪಾದಕತೆ 380 ಕೇಜಿ ಒಣ ಬೀಜ. ಪ್ರತಿ ಪ್ರದೇಶದಿಂದ ದೊರೆಯುವಂತಹ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಚಾಕೊಲೇಟ್ ಉದ್ಯಮದಲ್ಲಿರುವ ಸುಮಾರು 45000 ಸಾವಿರ ಟನ್ ಬೇಡಿಕೆಯನ್ನು ಪೂರೈಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನ ಶಿಫಾರಸಿನಂತೆ ಕೊಕ್ಕೊ ಪ್ರದೇಶ ವಿಸ್ತರಣೆ ಕಾರ್ಯಕ್ರಮಗಳಲ್ಲಿ ಅನೇಕ ಗಣ್ಯ ಕ್ಲೋನ್‌ಗಳನ್ನು (ತದ್ರೂಪಗಳನ್ನು) ಮತ್ತು ಸಂಕರಣ ತಳಿಗಳನ್ನು ಉಪಯೋಗಿಸಿಕೊಳ್ಳುವುದು ಬಹು ಮುಖ್ಯ.

ಮಲೇಷಿಯಾದಿಂದ ಕೆಲವು ಕೊಕ್ಕೊ ವಂಶವಾಹಿನಿಗಳನ್ನು ನಮ್ಮ ದೇಶಕ್ಕೆ ಪರಿಚಯಿಸಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಭಾ.ಕೃ.ಸಂ.ಪ.)-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ತನ್ನ ಪ್ರಾಂತೀಯ ಕ್ಷೇತ್ರವಾದ ಕರ್ನಾಟಕದ ವಿಟ್ಲದಲ್ಲಿ 1969 ರಲ್ಲಿ ಕೊಕ್ಕೊ ಸಂಶೋಧನೆಯನ್ನು ಪ್ರಾರಂಭಿಸಿತು. ಆಗಿನಿಂದ ಪ್ರಮುಖ ಮತ್ತು ದ್ವಿತೀಯ ಮೂಲ ಕೇಂದ್ರಗಳಿಂದ ಮತ್ತು ಹಂಚಿಹೋದ ಕೇಂದ್ರಗಳಿಂದ ವಂಶವಾಹಿನಿಗಳ ಸಂಗ್ರಹಣೆ, ಕ್ಷೇತ್ರ ಜೀನ್ ಬ್ಯಾಂಕ್‌ನಲ್ಲಿ ಸಂರಕ್ಷಣೆ, ಮೌಲ್ಯಮಾಪನ ಮತ್ತು ಅಪೇಕ್ಷಣೀಯ ಗುಣಗಳಿಗೆ ತಳಿ ಅಭಿವೃದ್ಧಿ, ಇನ್ನು ಇತ್ಯಾದಿ ತಳಿ ಅಭಿವೃದ್ಧಿ ತಂತ್ರಗಳನ್ನು ಅನುಸರಿಸುವುದರ ಮೂಲಕ ಕೊಕ್ಕೊ ಅಭಿವೃದ್ಧಿ ಕಾರ್ಯಕ್ರಮಗಳು ವ್ಯವಸ್ಥಿತ ರೀತಿಯಲ್ಲಿ ತೀವ್ರ ಸ್ವರೂಪ ಪಡೆದವು. ಕಳೆದ ನಲವತ್ತು ವರ್ಷಗಳಿಗಿಂತ ಹೆಚ್ಚು ಸಮಯದಲ್ಲಿ ತಳಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅನುಸರಿಸಿದ ವಿಧಾನಗಳನ್ನು ಮತ್ತು ಅಧಿಕ ಇಳುವರಿಗಾಗಿ, ನಿರ್ದಿಷ್ಟ ಗುಣಗಳಿಗಾಗಿ ಅಭಿವೃದ್ಧಿಪಡಿಸಿದ ತಳಿಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

## ತಳಿ ಅಭಿವೃದ್ಧಿ ವಿಧಾನಗಳು

### ಆಯ್ಕೆ :

ಈ ವಿಧಾನವು, ಒಂದು ಸುಲಭ ತಳಿ ಅಭಿವೃದ್ಧಿ ಮಾರ್ಗವಾಗಿದ್ದು ಅನುವಂಶೀಯವಾಗಿ ವೈವಿಧ್ಯತೆಯನ್ನು ಹೊಂದಿರುವ ಸಮೂಹದಲ್ಲಿ ಇದು ಸಾಧ್ಯ. ಕೊಕ್ಕೊ ಪರಕೀಯ ಪರಾಗಸ್ಪರ್ಷವನ್ನು ಹೊಂದಿರುವ ಬೆಳೆಯಾಗಿರುವುದರಿಂದ ಮತ್ತು ಸ್ವ-ಅನನುರೂಪತೆ ಅಸ್ತಿತ್ವದಲ್ಲಿರುವುದರಿಂದ ಸಸಿಗಳ ಸಮೂಹದಲ್ಲಿ ವೈವಿಧ್ಯತೆ ಎಷ್ಟಿರುತ್ತೆಂದರೆ, ಶೇಕಡ 75 ರಷ್ಟು ಇಳುವರಿಯನ್ನು ಶೇಕಡ 25 ರಷ್ಟು ಮರಗಳಿಂದ ಪಡೆಯಬಹುದು. ಭಾ.ಕೃ.ಸಂ.ಪ.-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಪ್ರಾಂತೀಯ ಕ್ಷೇತ್ರ, ವಿಟ್ಲದಲ್ಲಿ 400 ಕ್ಕಿಂತ ಹೆಚ್ಚು ಕೊಕ್ಕೊ ವಂಶವಾಹಿನಿಗಳನ್ನು ಸಂರಕ್ಷಿಸಿಡಲಾಗಿದ್ದು, ಮೂಲಭೂತ ವಿಧಗಳಾದ ಕ್ರಿಯೆಲ್ಲೋ, ಫಾರೆಸ್ಟೆರೋ, ಟ್ರನಿಟಾರಿಯೋ ಗುಂಪುಗಳು ಮತ್ತು ಬೇರೆ ಬೇರೆ ಅನುವಂಶೀಯ ಮತ್ತು ಭೌಗೋಳಿಕ ಮೂಲದ ಕ್ಲೋನ್‌ಗಳನ್ನು ಒಳಗೊಂಡಿದೆ. ಮೌಲ್ಯಮಾಪನ ಪ್ರಯೋಗಗಳು ಮುಖ್ಯವಾಗಿ ಸಸ್ಯಕ ಕ್ರಿಯಾಶೀಲತೆ, ಬಾಲಪ್ರೌಢತೆ, ಇಳುವರಿ ಸ್ಥಿರತೆ, ಉತ್ಪಾದನಾ ಸಾಮರ್ಥ್ಯ, ಹೊಂದಾಣಿಕೆ ವರ್ತನೆ, ಗುಣಮಟ್ಟದ ಅಂಶಗಳು ಮತ್ತು ಜೈವಿಕ ಮತ್ತು ಅಜೈವಿಕ ಒತ್ತಡಗಳಿಗೆ ಅವುಗಳ ಪ್ರತಿಕ್ರಿಯೆಗಳನ್ನು ಅಳೆಯಲು ಕೇಂದ್ರಿಕೃತವಾಗಿರುತ್ತವೆ.

### ಕ್ಲೋನಲ್ ಆಯ್ಕೆ :

ಈ ಶತಮಾನದ ಆರಂಭದಲ್ಲಿ, ಕಾಯಿ ಸೂಚ್ಯಂಕ, ಬೀಜದ ಗಾತ್ರ ಮತ್ತು ರೋಗ ನಿರೋಧಕತೆ ಮಾನದಂಡಗಳನ್ನು ಆಧರಿಸಿ ಕ್ಲೋನಲ್ ಆಯ್ಕೆ ಕಾರ್ಯಕ್ರಮಗಳು ಆರಂಭವಾದವು. ಸಸಿಗಳ ಸಮೂಹಗಳಿಂದ ಪ್ರತ್ಯೇಕ ಮರಗಳ ಆಯ್ಕೆಗಳನ್ನು ಮಾಡಿ ಇವುಗಳನ್ನು ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಸಂಭಾವ್ಯ ಅನುವಂಶೀಯತೆಯನ್ನು ಸ್ಥಿರಪಡಿಸಲು ಕ್ಲೋನಲ್ ಪರೀಕ್ಷೆಗಳಲ್ಲಿ ಮತ್ತಷ್ಟು ಮೌಲ್ಯಮಾಪನ ಮಾಡಲಾಗುತ್ತದೆ. ತಳಿ ಅಭಿವೃದ್ಧಿಗೆ ತೆಗೆದುಕೊಳ್ಳುವ ಕಾಲವನ್ನು ಕಡಿಮೆ ಮಾಡಲು, ಕಡಿಮೆ ಮೇಲಾವರಣದಿಂದ ಅತ್ಯಧಿಕ-

ಇಳುವರಿಯನ್ನು ಪಡೆಯಲು, ಅಪೇಕ್ಷಣೀಯ ಗುಣಲಕ್ಷಣಗಳನ್ನು ಒಂದುಗೂಡಿಸಲು ಇನ್ನು ಇತ್ಯಾದಿ ಕಾರಣಗಳಿಂದಾಗಿ ದೀರ್ಘಕಾಲಿಕ ಬೆಳೆಗಳ ತಳಿಸೃಷ್ಟಿ ಕಾರ್ಯಕ್ರಮಗಳಲ್ಲಿ ತಳಿಗಳನ್ನು ಕ್ಲೋನ್‌ಗಳಾಗಿ ಉತ್ಪತ್ತಿ ಮಾಡುವುದು ಅತಿಅವಶ್ಯಕ. ಭಾ.ಕೃ.ಸಂ.ಪ.-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಮೂಲತಃ ಕೊಕ್ಕೊ ವಂಶವಾಹಿನಿಗಳ ಬೀಜಗಳನ್ನು ಆಮದು ಮಾಡಿಕೊಂಡು ಸ್ಥಳೀಯ ಪರಿಸ್ಥಿತಿಗಳಲ್ಲಿ ಮೌಲ್ಯಮಾಪನ ಮಾಡಿ, ಪ್ರತ್ಯೇಕ ಮರಗಳನ್ನು ಆಯ್ಕೆ ಮಾಡಿಕೊಂಡು, ಕ್ಲೋನ್‌ಗಳನ್ನು ಉತ್ಪತ್ತಿ ಮಾಡಿ ಅನೇಕ ಕ್ಲೋನ್‌ಗಳನ್ನು ಇನ್ನಷ್ಟು ಮೌಲ್ಯಮಾಪನ ಮಾಡಲಾಗುತ್ತಿತ್ತು. ಅನಂತರ, ಮೊಗ್ಗಿನ ಕೋಲುಗಳನ್ನು ಆಮದು ಮಾಡಿಕೊಂಡು, ಕ್ಲೋನ್‌ಗಳಾಗಿ ಸಂರಕ್ಷಿಸಿ, ಮೌಲ್ಯಮಾಪನ ಮಾಡಿ ಅವುಗಳ ಹಲವು ವರ್ಷಗಳ ಪ್ರದರ್ಶನದ ಆಧಾರದ ಮೇಲೆ ಕ್ಲೋನ್‌ಗಳನ್ನು ಆಯ್ಕೆ ಮಾಡಲಾಗುತ್ತದೆ.

**ಸಂಕರೀಕರಣ :**

ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸುವುದು ಕೊಕ್ಕೊ ತಳಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಅಳವಡಿಸಿಕೊಳ್ಳುವಂತಹ ಮತ್ತೊಂದು ವಿಧಾನ. ಈ ವಿಧಾನವನ್ನು ಮುಖ್ಯವಾಗಿ ನಿರೋಧಕ ಶಕ್ತಿಯನ್ನು ಹೊಂದಿರುವ ತಳಿಗಳನ್ನು ಉತ್ಪಾದಿಸಲು ಉಪಯೋಗಿಸುತ್ತಾರೆ. ಸ್ವಯಂ-ಅನನುರೂಪತೆ/ಸ್ವಯಂ-ಹೊಂದಾಣಿಕೆಯಾಗದಿರುವುದರ ಲಭ್ಯತೆ ಕೊಕ್ಕೊದಲ್ಲಿ ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಲು ಅನುಕೂಲಕರವಾಗಿದೆ. ಭಾ.ಕೃ.ಸಂ.ಪ.-ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ 1980ರ ನಂತರ ನಿರ್ದಿಷ್ಟ ಉದ್ದೇಶಗಳನ್ನಿಟ್ಟು-ಕೊಂಡು 80 ಸಂಕರಣ ಸಂಯೋಜನೆಗಳನ್ನು ಒಳಗೊಂಡ ಐದು ಪೀಳಿಗೆ ಪರೀಕ್ಷಣೆಗಳನ್ನು ಪ್ರಯತ್ನಿಸಲಾಯಿತು ಮತ್ತು ಅತ್ಯುತ್ತಮ ಸಂಕರಣಗಳನ್ನು ತಳಿಗಳಾಗಿ ಅಭಿವೃದ್ಧಿಪಡಿಸಲಾಯಿತು. ಸಂಕರಣ ಪೀಳಿಗೆಗಳನ್ನು ಸಸಿಗಳಾಗಿ ಪರಿಣಾಮಕಾರಿಯಾಗಿ ಪರೀಕ್ಷಿಸಿದ ನಂತರ ಕ್ಲೋನಲ್ ಮೌಲ್ಯಮಾಪನ ಮತ್ತು ಆಯ್ಕೆಯನ್ನು ಕೊಕ್ಕೊದಲ್ಲಿ ಶಿಫಾರಸು ಮಾಡಲಾಗಿದೆ. ಈ ವಿಧಾನ ಪ್ರತಿ ಬಾರಿ ಪ್ರತ್ಯೇಕ ಸಂಕರಣದ ಆಯ್ದ ಸಂಕರಣ ಸಂಯೋಜನೆಗೆ ಹೋಗುವ ಬದಲು ತಾಯಿ ಮರಗಳ ವ್ಯಾಪಕ ವಿತರಣೆಯನ್ನು ಉತ್ತೇಜಿಸುತ್ತದೆ.

## ಸಂಕರಣ ತಳಿಗಳು

### ವಿ.ಟಿ.ಎಲ್.ಸಿ.ಹೆಚ್.-1 (ವಿಟ್ಲ ಕೊಕ್ಕೊ ಸಂಕರಣ-1) :




- ಈ ತಳಿಯು ಮಲೇಷಿಯಾದಿಂದ ಸಂಗ್ರಹಿಸಿದ ವಂಶವಾಹಿನಿಗಳಾದ EC 631540 X EC 631534 ನಡುವಿನ ಸಂಕರಣ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 50 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 350 ಗ್ರಾಂ. ಇದ್ದು ಸರಾಸರಿ 40 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಇಳುವರಿ : ಸರಾಸರಿ 959 ಕೇಜಿ ಒಣಬೀಜ.
- ಬೀಜದಲ್ಲಿ ತಿರುಳಿನ ಪ್ರಮಾಣ : ಸರಾಸರಿ 87%.
- ಕೊಬ್ಬಿನ ಪ್ರಮಾಣ : ಸರಾಸರಿ 54%.
- ಅಧಿಕ ಇಳುವರಿ ನೀಡುವ ತಳಿಯಾಗಿದ್ದು, ಕಪ್ಪುಕಾಯಿ ಕೊಳೆ ರೋಗ, ಟೀ ಸೊಳ್ಳೆ ಮತ್ತು ನೀರಿನ ಅಭಾವವನ್ನು ತಡೆದುಕೊಳ್ಳುವ ಗುಣಗಳನ್ನು ಹೊಂದಿದೆ.

### ವಿ.ಟಿ.ಎಲ್.ಸಿ.ಹೆಚ್.-2 (ವಿಟ್ಲ ಕೊಕ್ಕೊ ಸಂಕರಣ-2) :

- ಈ ತಳಿಯು ಲಾಲ್‌ಭಾಗ್‌ನಿಂದ ಸಂಗ್ರಹಿಸಿದ ವಂಶವಾಹಿನಿಗಳಾದ IC 565551 X IC 565556 ನಡುವಿನ ಸಂಕರಣ.

- ಪ್ರತಿ ಗಿಡ ವರ್ಷಕ್ಕೆ ಸರಾಸರಿ 50 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 350 ಗ್ರಾಂ. ಇದ್ದು ಸರಾಸರಿ 40 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 1030 ಕೇಜಿ ಒಣಬೀಜ.
- ಬೀಜದಲ್ಲಿ ತಿರುಳಿನ ಪ್ರಮಾಣ : ಸರಾಸರಿ 89%.
- ಕೊಬ್ಬಿನ ಪ್ರಮಾಣ : ಸರಾಸರಿ 54%.
- ಅಧಿಕ ಇಳುವರಿ ನೀಡುವ ತಳಿಯಾಗಿದ್ದು, ಕಪ್ಪುಕಾಯಿ ಕೊಳೆ ರೋಗವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.




## ವಿ.ಟಿ.ಎಲ್.ಸಿ.ಹೆಚ್.-3 (ವಿಟ್ಲ ಕೊಕ್ಕೊ ಸಂಕರಣ-3) :

- ಈ ತಳಿಯು ಮಲೇಷಿಯಾ X ನೈಜೀರಿಯಾ ದೇಶಗಳಿಂದ ಸಂಗ್ರಹಿಸಿದ ವಂಶವಾಹಿನಿಗಳಾದ EC 631534 X EC 631546 ನಡುವಿನ ಸಂಕರಣ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 41 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 440 ಗ್ರಾಂ. ಇದ್ದು ಸರಾಸರಿ 41 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ: 1150 ಕೇಜಿ ಒಣಬೀಜ.
- ಬೀಜದಲ್ಲಿ ತಿರುಳಿನ ಪ್ರಮಾಣ: ಸರಾಸರಿ 87%.
- ಕೊಬ್ಬಿನ ಪ್ರಮಾಣ: ಸರಾಸರಿ 51%.
- ಕಡಿಮೆ ನೀರಿರುವ ಪ್ರದೇಶದಲ್ಲೂ ಉತ್ತಮವಾಗಿ ಇಳುವರಿ ಕೊಡುಬಲ್ಲ ತಳಿ.




## ವಿ.ಟಿ.ಎಲ್.ಸಿ.ಹೆಚ್.-4 (ವಿಟ್ಲ ಕೊಕ್ಕೊ ಸಂಕರಣ-4) :

- ಈ ತಳಿಯು ಮಲೇಷಿಯಾ x ನೈಜೀರಿಯಾ ದೇಶಗಳಿಂದ ಸಂಗ್ರಹಿಸಿದ ವಂಶವಾಹಿನಿಗಳಾದ EC 631534 X EC 631556 ನಡುವಿನ ಸಂಕರಣ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 40 ಕಿತ್ತಳೆ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 440 ಗ್ರಾಂ. ಇದ್ದು ಸರಾಸರಿ 40 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 1090 ಕೇಜಿ ಒಣಬೀಜ.
- ಬೀಜದಲ್ಲಿ ತಿರುಳಿನ ಪ್ರಮಾಣ : ಸರಾಸರಿ 87%.
- ಕೊಬ್ಬಿನ ಪ್ರಮಾಣ : ಸರಾಸರಿ 51%.




- ಅಧಿಕ ಇಳುವರಿಯಲ್ಲದೇ, ಕಡಿಮೆ ನೀರಿರುವ ಪ್ರದೇಶದಲ್ಲೂ ಉತ್ತಮವಾಗಿ ಇಳುವರಿ ಕೊಡಬಲ್ಲ ತಳಿ.

## ವಿ.ಟಿ.ಎಲ್.ಸಿ.ಹೆಚ್.-5 (ವಿಟ್ಲ ಕೊಕ್ಕೊ ಸಂಕರಣ- 5) : ನೇತ್ರ ಸೆಂಚುರ

- ಈ ತಳಿಯು IC 565554 X IC 565559 ನಡುವಿನ ಸಂಕರಣವಾಗಿದ್ದು ವಿ.ಟಿ.ಎಲ್.ಸಿ.ಪಿ.-1 ಎಂಬ ಹೆಸರಿನಲ್ಲಿ ಮೌಲ್ಯಮಾಪನ ಮಾಡಲಾಗಿದ್ದು, ನೇತ್ರ ಸೆಂಚುರ ಎಂಬ ಹೆಸರಿಡಲಾಗಿದೆ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 66 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.

- ಒಂದು ಹಣ್ಣಿನ ತೂಕ ಸುಮಾರು 400-450 ಗ್ರಾಂ. ಇದ್ದು ಸರಾಸರಿ 43 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 1500-1800 ಕೇಜಿ ಒಣಬೀಜ.
- ಬೀಜದಲ್ಲಿ ಸರಾಸರಿ ತಿರುಳಿನ ಪ್ರಮಾಣ : 66%.
- ಸರಾಸರಿ ಕೊಬ್ಬಿನ ಪ್ರಮಾಣ : 52%.
- ಶೀಘ್ರವಾಗಿ ಅಧಿಕ ಇಳುವರಿ ನೀಡುವ, ಕಪ್ಪು ಕಾಯಿ ಕೊಳೆ ರೋಗ, ಟೀ ಸೊಳ್ಳೆ ಮತ್ತು ನೀರಿನ ಅಭಾವವನ್ನು ಮಾಧ್ಯಮಿಕವಾಗಿ ತಡೆದುಕೊಳ್ಳುವ ಗುಣವಿರುವ ತಳಿಯಾಗಿದ್ದು ಅತೀ ಸಾಂದ್ರತೆಯಲ್ಲಿ ನೆಡಲು ಸೂಕ್ತವಾಗಿದೆ.


VTLCH 5

## ಕ್ಲೋನ್‌ಗಳು

### ವಿ.ಟಿ.ಎಲ್.ಸಿ.ಸಿ.-1 (ವಿಟ್ಲ ಕೊಕ್ಕೊ ಕ್ಲೋನ್-1) :

- ಈ ತಳಿಯು ನೈಜೀರಿಯಾದಿಂದ ಸಂಗ್ರಹಿಸಿದ ವಂಶವಾಹಿನಿಯಾದ EC 631558 ನಿಂದ ಕ್ಲೋನಲ್ ಆಯ್ಕೆ ಮೂಲಕ ಅಭಿವೃದ್ಧಿ ಪಡಿಸಿದ ತಳಿ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 55 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 350 ಗ್ರಾಂ. ಇದ್ದು ಸರಾಸರಿ 35 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 890 ಕೇಜಿ ಒಣಬೀಜ.
- ಬೀಜದಲ್ಲಿ ಸರಾಸರಿ ತಿರುಳಿನ ಪ್ರಮಾಣ : 88%.
- ಸರಾಸರಿ ಕೊಬ್ಬಿನ ಪ್ರಮಾಣ : 50%.
- ಶೀಘ್ರವಾಗಿ ಮತ್ತು ಸುಸ್ಥಿರವಾಗಿ ಅಧಿಕ ಇಳುವರಿ ಕೊಡುತ್ತದೆ.


VTLCC 1

### ವಿ.ಟಿ.ಎಲ್.ಸಿ.ಎಸ್.-1 (ವಿಟ್ಲ ಕೊಕ್ಕೊ ಆಯ್ಕೆ-1) :

- ಈ ತಳಿಯು VTLC-1 (IC 0597837) ನಿಂದ ಆಯ್ಕೆ ಮೂಲಕ ಅಭಿವೃದ್ಧಿಪಡಿಸಿದ ತಳಿ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 55 ಕಿತ್ತಳೆ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 360 ಗ್ರಾಂ. ಇದ್ದು ಸರಾಸರಿ 42 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 1700 ಕೇಜಿ ಒಣಬೀಜ.
- ಬೀಜದಲ್ಲಿ ತಿರುಳಿನ ಪ್ರಮಾಣ : ಸರಾಸರಿ 88%.
- ಸರಾಸರಿ ಕೊಬ್ಬಿನ ಪ್ರಮಾಣ : 52%.
- ಈ ತಳಿಯು ಆಕರ್ಷಕ ಹಣ್ಣುಗಳನ್ನು ಹೊಂದಿದ್ದು ಸುಸ್ಥಿರವಾಗಿ ಅಧಿಕ ಇಳುವರಿಯನ್ನು ಕೊಡುತ್ತದೆ.


VTLCS 1

- ಕಪ್ಪು ಕಾಯಿ ಕೊಳೆ ರೋಗ, ಟೀ ಸೊಳ್ಳೆ ಮತ್ತು ಕಡಿಮೆ ನೀರನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.

### ವಿ.ಟಿ.ಎಲ್.ಸಿ.ಎಸ್.-2 (ವಿಟ್ಲ ಕೊಕ್ಕೊ ಆಯ್ಕೆ-2) :

- ಈ ತಳಿಯು VTLC-57 (IC 0597838) ನಿಂದ ಆಯ್ಕೆ ಮೂಲಕ ಅಭಿವೃದ್ಧಿಪಡಿಸಿದ ತಳಿ.
- ಪ್ರತಿ ಗಿಡ ವರ್ಷಕ್ಕೆ ಸರಾಸರಿ 55 ಹಳದಿ ಬಣ್ಣದ ಹಣ್ಣುಗಳನ್ನು ನೀಡುತ್ತದೆ.
- ಒಂದು ಹಣ್ಣಿನ ತೂಕ ಸುಮಾರು 400 ಗ್ರಾಂ. ಇದ್ದು ಸರಾಸರಿ 41 ಬೀಜಗಳನ್ನು ಹೊಂದಿರುತ್ತದೆ.
- ಒಂದು ಹೆಕ್ಟೇರ್‌ಗೆ ಸರಾಸರಿ ಇಳುವರಿ : 1840 ಕೇಜಿ ಒಣಬೀಜ.
- ಬೀಜದಲ್ಲಿ ಸರಾಸರಿ ತಿರುಳಿನ ಪ್ರಮಾಣ : 85%.
- ಸರಾಸರಿ ಕೊಬ್ಬಿನ ಪ್ರಮಾಣ : 53%.
- ಅಧಿಕ ಇಳುವರಿಯನ್ನು ಕೊಡುವುದರ ಜೊತೆಗೆ ರೋಗ (ಕಪ್ಪು ಕಾಯಿ ಕೊಳೆ ರೋಗ) ಮತ್ತು ಕೀಟಗಳ (ಟೀ ಸೊಳ್ಳೆ) ಬಾಧೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.




ಈ ಎಲ್ಲಾ ಕೊಕ್ಕೊ ತಳಿಗಳು ಕರ್ನಾಟಕ ಮತ್ತು ಕೇರಳ ರಾಜ್ಯಗಳ ಪಶ್ಚಿಮ ಘಟ್ಟ ಬೆಟ್ಟಗಳ ಪ್ರದೇಶಗಳು ಮತ್ತು ಬಯಲು ಪ್ರದೇಶಗಳ ತೆಂಗು ಮತ್ತು ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಮತ್ತೂ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವ ರಾಜ್ಯಗಳ ತೆಂಗು ಬೆಳೆಯುವ ಪ್ರದೇಶಗಳಲ್ಲಿ ನೀರಾವರಿ ಪರಿಸ್ಥಿತಿಗಳಲ್ಲಿ ಬೆಳೆಯಲು ಸೂಕ್ತವಾಗಿವೆ. ಮಿಶ್ರ/ಅಂತರ ಬೆಳೆ ಪದ್ಧತಿಯಲ್ಲಿ ವಾರ್ಷಿಕ ವ್ಯವಸ್ಥಿತ ಸವರುವಿಕೆಯ ಮೂಲಕ ಸೂಕ್ತ ಎತ್ತರ ಮತ್ತು ಮೇಲಾವರಣವನ್ನು ನಿರ್ವಹಣೆ ಮಾಡಬೇಕು. ಶಿಫಾರಸು ಮಾಡಿರುವ ಬೆಳೆ ಪದ್ಧತಿಗಳನ್ನು ಅನುಸರಿಸುವುದರಿಂದ ಕೊಕ್ಕೊ ಬೆಳೆ ಸಾಮರ್ಥ್ಯವನ್ನು ಹೆಚ್ಚಿಸಬಹುದು.

**ಕೃಷಿ ವಿಸ್ತರಣಾ ಪ್ರಕಟಣೆ ಸಂಖ್ಯೆ : 254**
**ಭಾ.ಕೃಸಂ.ಪ.-ಸಿ.ಪಿ.ಸಿ.ಆರ್.ಐ. ನ ಕೊಕ್ಕೊ ತಳಿಗಳು**

ಭಾ.ಕೃಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
ಕಾಸರಗೋಡು - 671 124, ಕೇರಳ
ದೂರವಾಣಿ : 04994-232893/94/95, 232090, ಫ್ಯಾಕ್ಸ್ : 04994-232322
ಇ–ಮೈಲ್ : director.cpcri@icar.gov.in, directorcpcri@gmail.com
ಜಾಲತಾಣ : http://www.cpcri.gov.in

ಪ್ರಕಾಶಕರು :
ಡಾ. ಪಿ. ಚೌಡಪ್ಪ
ನಿರ್ದೇಶಕರು, ಭಾ.ಕೃಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
ಕಾಸರಗೋಡು - 671 124, ಕೇರಳ

ಅನುವಾದ :
ನಾಗರಾಜ ಎನ್. ಆರ್.
ಎಲೈನ್ ಅಪ್ಸರ ಎಸ್.
ಆನಂದ ಕೆ. ಎಸ್.

ಛಾಯಾ ಚಿತ್ರ :
ಕೆ. ಶ್ಯಾಮಪ್ರಸಾದ್
ಎಲೈನ್ ಅಪ್ಸರ ಎಸ್.

ಡಿಸೆಂಬರ್ 2016

ಪ್ರಾಯೋಜಕರು :
ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿನ್, ಕೇರಳ

ಮುದ್ರಣ :
ಹನುಮಾನ್ ಪ್ರಿಂಟರ್ಸ್, ವಿಟ್ಲ, ಬಂಟ್ವಾಳ ತಾಲೂಕು, ದ.ಕ. - 574 243, ಕರ್ನಾಟಕ
ಮೊ.: 9945752125, ಇ–ಮೈಲ್: hanumanprintersvtl@gmail.com